(SRI V. N. PATIL)

land revenue, and water rate taxes, though their lands are out of use for three to four years. In those cases, what relief measures Government propose to take immediately ?

Sri H.V. KOUJALGI.—As I told an Hon. Member just now, the earliest step we can think of is remission of land revenue. But as regards any other help, Government will have to think over it and that will take a little time.

Sri H. SIDDAVEERAPPA.—I wish to know whether this alkalinity under Bhadra Project is to be confined only to two Taluks or the other Taluks also which come under that scheme ? Has it come to the notice of the Government that the Bhadra Advisory Committee, after having seen the enormity of this malaise, have also reported to the Government that steps should be taken to see that this should be checked as early as possible as it is spreading throughout the area ?

Sri H. V. KOUJALGI.—Government will take serious notice of it.

ಶ್ರೀ ಎಂ. ಎಂ. ಜೋಲನವಟ್ಟಿ.—ಸ್ವಾಮಿ, ಕ್ಷಾರೀಯ ಮತ್ತು ಲವಣತ್ವ ಹೊಂದಿದ ಜಮೀನು ಗಳಲ್ಲಿ ಬೆಳೆ ಆಗುವುದಿಲ್ಲ. ಆರೀತಿ ಬೆಳೆ ಆಗದಿದ್ದರೆ ಆಬ್ಕಾರಿಗೆ ಕಷ್ಟವಾಗುತ್ತದೆ. ಅದುದರಿಂದ ಇದರ ಬಗ್ಗೆ ಸರ್ಕಾರದವರು ಸರ್ವೆ ಮಾಡಿಸಿದ್ದೀರಾ ?

ಶ್ರೀ ಎಚ್. ಎ. ಕೌಜಲಗಿ.—ನಾನು ಮೊದಲೇ ಹೇಳಿದ ಹಾಗೆ ದೇಶದಲ್ಲಿ ಎಲ್ಲೆಲ್ಲಿ ಈರೀತಿ ಆಗಿದೆ ಆ ಕಡೆಗಳಲ್ಲಿ ಸರ್ವೆ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಇನ್ನೂ ಸರ್ವೆ ಮಾಡಿಸಿಲ್ಲ.

ಶ್ರೀ ಎಂ. ನಾಗಪ್ಪ,—ಭದ್ರ ಮತ್ತು ತುಂಗಾದಿಂದ ನಮಗೆ ಇಂತಹ ಅನುಭವ ಆಗಿದೆ. ಯಾವ ಯಾವ ಭೂಮಿಗಳು ಲವಣತ್ವ ಹೊಂದಿವೆಯೋ ಅದರಲ್ಲಿ ಬೆಳೆ ಆಗದೆ ತೊಂದರೆಯಾಗಿರುವುದ ರಿಂದ ನೀರು ನಿರುಪಯುಕ್ತವಾಗಿ ಹೋಗಿರುವುದನ್ನು ಕಂಡು ಹಿಡಿದಿದ್ದಾರೆ. ಅದರಂತೆ ತುಂಗ ಪ್ರಾಜೆಕ್ಟ್ ಕೆಳಗಡೆ 5-5½ ಲಕ್ಷ ಎಕರೆ ಇದೆ. ಮತ್ತು ಅಪ್ಪರ್ ಕೃಷ್ಣ ಏರಿಯಾದಲ್ಲಿ ಕಪ್ಪು ಭೂಮಿ ಇದೆ. ಈರೀತಿ ಲವಣತ್ವ ಹೊಂದಿರುವ ಭೂಮಿ ಉದ್ಭವವಾಗುವ ಪರಿಸ್ಥಿತಿ ಬಂದಿದೆ. ಅದುದರಿಂದ ನೀವು ಆಯಾಯ ಡಿಸ್ಟ್ರಿಕ್ಟ್‌ನಲ್ಲಿ ರ್ಯಾಬರೆಟರಿಗಳನ್ನು ಸ್ಥಾಪಿಸಿ ಅಲ್ಲಿ ಸರ್ವೆ ಮಾಡಿಸಿ ಮುಂದೆ ಇದು ಬರಲಾರದಂತೆ ಅಸ್ಥೆ ವಹಿಸಿ ಇದನ್ನು ಹೋಗಲಾಡಿಸುವುದಕ್ಕೆ ನೀವು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದನ್ನು ಯೋಚಿಸುತ್ತೀರಾ ?

Sri H. V. KOUJALGI.—The suggestion made by the Hon. Member is, of course, worth considering. Government will consider it.

Mr. SPEAKER.—Question No. 912, the Hon. Member Sri Puttaranganath is absent. Now next question No. 926.

Permanent Relief Scheme in Kolar District

926 Sri B. L. NARAYANASWAMY (Srinivasapur).—

Will the Minister for Revenue be pleased to state :—

(*a*) whether there is any scheme to provide permanent relief to the people in Kolar District, suffering from frequent droughts ;

(*b*) if so, what is the scheme (a copy of the same may be furnished);

(*c*) if not, whether the Government intend to constitute an expert Committee consisting of both officials and non-officials to suggest suitable measures in this behalf ?

Sri H. V. KOUJALGI (Minister for Ravenue).—

(*a*) The question of drawing up programmes for the integrated development of areas in the State prone to scarity is under consideration of Government.

(*b*) Does not arise in view of the reply to clause (*a*)

(*c*) No.

ಶ್ರೀ ಬಿ. ಎಸ್. ನಾರಾಯನಸ್ವಾಮಿ.—ಸ್ವಾಮಿ, ಅಭಿವೃದ್ಧಿಗಾಗಿ ಕಾಯಕ್ರಮಗಳನ್ನು ಯೋಚಿಸುವ ವಿಷಯ ಸರ್ಕಾರದವರ ಪರಿಶೀಲನೆಯುಲ್ಲಿದೆಯೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಆದರೆ ಇದೇ ನಭೆಯಲ್ಲಿ ಅನೇಕ ವೇಳೆ ಕೇಂದ್ರ ಸರ್ಕಾರಕ್ಕೆ 20 ಕೋಟಿ ರೂಪಾಯಿಗಳ ಯೋಜನೆಯನ್ನು ಕಳುಹಿಸಿದ್ದೇವೆ. ಆದರೆ ಇನ್ನೂ ಅದಕ್ಕೆ ಮಂಜೂರಾತಿ ದೊರೆತಿಲ್ಲ ಎಂತಲೂ ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ ಸ್ವಾಮಿ ?

† Sri H. V. KOUJALGI.—It is a fact that representation had been made to the Central Government, requesting for help of Rs. 20 crores but the Central Government has suggested that all these schemes may be included in the Fourth Five-year Plan,

ಶ್ರೀ ಬಿ. ಎಸ್. ನಾರಾಯಣಸ್ವಾಮಿ.—ಯೋಜನೆ ಇಲ್ಲದೇ 20 ಕೋಟಿ ರೂಪಾಯಿ ಕೇಳಿದ್ದೀರಾ, ಸ್ವಾಮಿ ?

Sri H. V. KOUJALGI.—We had some schemes but it all depended upon the relief we get.

ಶ್ರೀ ಬಿ. ಎಸ್. ನಾರಾಯಣಸ್ವಾಮಿ.—ಸ್ವಾಮಿ, ಈರೀತಿ ಅರೆಮನಸ್ಸಿನಿಂದ ಕೆಲಸ ಮಾಡಿದರೆ ಜನಗಳ ಕೆಲಸ ಪರಿಹಾರವಾಗುವುದಿಲ್ಲ. ಆದುದರಿಂದ ಸ್ಥಳೀಯವಾಗಿ ನೀವೇ ಒಂದು ಯೋಜನೆ ತಯಾರು ಮಾಡಿ ಕೇಂದ್ರಕ್ಕೆ ಕಳುಹಿಸುವುದರಲ್ಲಿ ತಪ್ಪು ಏನು ಇದೆ ?

Sri H. V. KOUJALGI.—There is no objection to send any scheme to the Central Government. But what is required is their help. We have broadly sent schemes and they were appreciated. We did not send any particular scheme but broad schemes affecting the whole State are sent. The Central Government stated that all these schemes should be included in the IV Plan and not separately.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ನಮ್ಮದು ಮೇಲಿಂದಮೇಲೆ ಬರಗಾಲಕ್ಕೆ ತುತ್ತಾಗಿರುವ ರಾಜ್ಯ. ಕೋಲಾರ ಮತ್ತು ಇತರ ಜಿಲ್ಲೆಗಳಿಗೆ ಇಂಟಿಗ್ರೇಟೆಡ್ ಪ್ಲಾನ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ ಎಂದು ಹೇಳುತ್ತೀರಿ. ಕೇಂದ್ರ ಸರ್ಕಾರದವರು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಔಟ್‌ಸೈಡ್ ದಿ ಪ್ಲಾನ್ ಎಂದು ಒಪ್ಪಿಕೊಂಡಿದ್ದಾರೆಯೇ ಹೇಗೆ ಅಥವಾ ಪ್ಲಾನ್ ಸೀಲಿಂಗ್‌ನಲ್ಲಿ ಕೂಡಿಸಿಕೊಡುತ್ತಾರೋ ಹೇಗೆ ?

ಶ್ರೀ ಹೆಚ್. ವಿ. ಕೌಜಲಗಿ.—ಅವರು ಈ ಪ್ಲಾನ್‌ನಲ್ಲಿ ಕೂಡಿಸಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ (ಎ) ಗೆ ಉತ್ತರವಾಗಿ The question of drawing up programmes for the integrated development of areas in the State prone to scarcity is; under consideration of Government, " ಎಂದು ಹೇಳಿದ್ದೀರಿ. ಇನ್ನು ಎಷ್ಟು ದಿವಸ ದೊಳಗಾಗಿ ಇಂತಹ ಒಂದು ಇಂಟಿಗ್ರೇಟೆಡ್ ಸ್ಕೀಂ ತಯಾರುಮಾಡುತ್ತೀರಿ?

Sri H. V. KOUJALGI.—Government have already worked a broad programme but the details are not worked out.

ಶ್ರೀ ಬಿ. ಎಸ್. ನಾರಾಯಣಸ್ವಾಮಿ.—20 ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಲಾಗಿದೆ ಎಂದು ಹೇಳಿದರು. ಅದರ ವಿವರಗಳನ್ನು ಸಭೆಗೆ ತಿಳಿಸಬಹುದೇ ?

Sri H. V. KOUJALGI.—Providing irrigation wells, contour bunding, minor irrigation works, pumpsets and such other reliefs.

ಶ್ರೀ ಬಿ. ಪಿ. ಗಂಗಾಧರ್.—ನಾಲ್ಕನೆ ಯೋಜನೆಯಲ್ಲಿ ಈ ಕೆಲಸಕಾರ್ಯಗಳನ್ನು ಸೇರಿಸಬಹುದು ಎಂದು ಕೇಂದ್ರ ಸರ್ಕಾರ ಹೇಳಿದ್ದಾರೆಂದು ತಿಳಿಸಿದ್ದಾರೆ. ಈಗ ಯೋಜನೆಗಳಿಗೆ 'ಹಾಲಡೇ' ಕೊಡುತ್ತಲೇ ಇದ್ದೇವೆ. ಈಗ ಅಫೆಕ್ಟೆಡ್ ಏರಿಯಾಸ್‌ನಲ್ಲಿ ಕೆಲಸಕಾರ್ಯಗಳು ಆಗ ಬೇಕಾದ್ದು ಬಹಳ ತುರ್ತಾಗಿದ್ದು, ಅಲ್ಲಿ ಜನಗಳಿಗೆ ಪರಿಹಾರ ಸಿಕ್ಕಬೇಕಾದ್ದೂ ತುರ್ತಾಗಿದ್ದು. ಈ ಕಾರಣದಿಂದ ಈ 20 ಕೋಟಿ ರೂಪಾಯಿಗಳನ್ನು ಪ್ಲಾನಿನಿಂದ ಹೊರಗೆ ಕೇಂದ್ರ ಸರ್ಕಾರದಿಂದ ಒದಗಿಸಿಕೊಂಡು ಯೋಜನೆಗಳನ್ನು ಕಾರ್ಯಗತ ಮಾಡಲಕ್ಕೆ ಸಾಧ್ಯವಾಗುವುದಿಲ್ಲವೇ ?

Sri H. V. KOUJALGI.—Of course, we will do our best and request the Central Government for help. Apart from that, it is also the duty of the State and the State will make provision out of its funds.

ಶ್ರೀ ಎಂ. ಎಂ. ಹಾಲಸತ್ತಿ.—ಮಳೆ ಕಡಮೆಯಾಗಲಕ್ಕೆ ಅರಣ್ಯಗಳು ಕಡಿಮೆ ಆಗುತ್ತಿರುವುದು ಒಂದು ಕಾರಣ ಅದಕ್ಕಾಗಿ ಅರಣ್ಯವನ್ನು ಬೆಳೆಸಬೇಕು ಎಂದು ನ್ಯಾಷನಲ್ ಫಾರೆಸ್ಟ್ರಿ ಪಾಲಸಿ ಪ್ರಕಾರ ನಿರ್ದಿಷ್ಟ ಮಾಡಿದ್ದಾರಲ್ಲವೇ ? ಮೈದಾನ ಪ್ರದೇಶಗಳಲ್ಲಿ ಕನಿಷ್ಟ ಸೇಕಡ 20 ರಷ್ಟು ಅರಣ್ಯವಿರಬೇಕು ಎಂದೂ ಅವರು ನಿರ್ಧಾರಮಾಡಿಲ್ಲವೇ ? ಹಾಗಿದ್ದರೆ ಕೋಲಾರ ಜಿಲ್ಲೆಯಲ್ಲಿ ಅಫಾರೆಸ್ಟೇಷನ್ ಮಾಡಲಕ್ಕೆ ಸರ್ಕಾರದವರು ಯಾವ ನಿರ್ದಿಷ್ಟ ಯೋಜನೆಯನ್ನು ಕೈಗೆಳ್ಳು ತಾ್ರೆ ?

Sri H. V. KOUJALGI.—In Kolar District some parts have been selected and afforestation work is going on but the rainfall being low, the progress is rather slow.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೋಲಾರ ಜಿಲ್ಲೆ ಸುಮಾರು ನೂರಾರು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಿಂದೆ ವಿಜಯನಗರದ ಸಂಸ್ಥಾನಾಧೀಶರು ಕೋಲಾರಕ್ಕೆ ಬಂದಾಗ ಬೇಕಾದಷ್ಟು ಹಣ ಮತ್ತು ದವಸ ಕೊಟ್ಟು ಹೋಗಿರುವುದು ಸರ್ಕಾರಕ್ಕೆ ಗೊತ್ತಿದೆ. ಅಫೆಕ್ಟೆಡ್ ಏರಿಯಾ ಇರುವ ಕಡೆ ಪರಿಹಾರ ಕಾರ್ಯ ತೆಗೆದುಕೊಳ್ಳುವುದನ್ನು ಸರ್ಕಾರ ಪರಿಶೀಲನೆ ಮಾಡದೆ ಇದ್ದರೆ ಎಷ್ಟು ವರ್ಷವಾದರೂ ನಾವು ಬರಗಾಲವನ್ನು ಸುಸೂತ್ರವಾಗಿ ನಡೆಸಿಕೊಂಡು ಬರುತ್ತೇವೆ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ಬೇಕಾದ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಕೋಲಾರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಹೆಚ್ಚಿನ ಕ್ರಮ ತೆಗೆದುಕೊಂಡಿದ್ದೇವೆ. ಇನ್ನೂ ಹೆಚ್ಚು ಹೆಚ್ಚು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಆರ್ಭಟ ಮಾಡುವುದನ್ನು ನೋಡಿದರೆ ಕೋಲಾರದಲ್ಲಿ ಬರಗಾಲವಿದೆ ಎಂದು ತಿಳಿಯಬಹುದೇ ಸ್ವಾಮಿ, ! (ನಗು)

(ಉತ್ತರವಿಲ್ಲ)

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ಖಾಯಂ ಪರಿಹಾರ ಕ್ರಮಗಳಲ್ಲಿ ಮುಖ್ಯವಾದುದು ನೀರಾವರಿ ಬಾವಿಗಳನ್ನು ತೋಡಿಸುವ ಕೆಲಸ. ಅಲ್ಲಿ ಯಾರೋ ಕೆಲವರು ಬಾಕಿ ಕೊಟ್ಟಿಲ್ಲ ಎಂದು ಬಾವಿಗಳಿಗೆ ಸಾಲ ಕೊಡುವುದನ್ನು ಘನ ಸರ್ಕಾರದವರು ನಿಲ್ಲಿಸಿರುವುದರಿಂದ, ಖಾಯಂ ಪರಿಹಾರ ಕಾರ್ಯಗಳನ್ನು ಕೋಲಾರ ಜಿಲ್ಲೆಯಲ್ಲಿ ತೆಗೆದುಕೊಳ್ಳುವುದಿಲ್ಲ. ಜನಗಳು ಇನ್ನೂ ತೊಂದರೆಗೆ ಸಿಕ್ಕಬೇಕು ಎನ್ನುವುದು ಸರ್ಕಾರದ ಅಭಿಪ್ರಾಯ ಇದ್ದ ಹಾಗೆ ಕಾಣುತ್ತದೆ. ಇದು ನಿಜವೇ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳುವಂತೆ ಸರ್ಕಾರದ ಅಭಿಪ್ರಾಯವಿಲ್ಲ. ಎಷ್ಟೋ ಕಡೆ ಬಾವಿಗೆ ಕೊಟ್ಟಂಥ ಸಾಲ ಸಾಕಷ್ಟು ಹಿಂದಕ್ಕೆ ಕೊಟ್ಟಿಲ್ಲ, ಕೆಲವು ಕಡೆಗೆ ಸರಿಯಾದ

ರೀತಿಯಲ್ಲಿ ಅದನ್ನು ಉಪಯೋಗ ಮಾಡಿಲ್ಲ. ಹೀಗಾಗಿ ಬ್ಯಾಂಕುಗಳಿಂದ ಕೆಲವರಿಗೆ ಸಾಲವನ್ನು ಕೊಟ್ಟಿರುವುದು ಹಿಂದಕ್ಕೆ ಬಾರದೆ ಇರುವುದರಿಂದ ಬಂದ್ ಮಾಡಬೇಕಾಗಿ ಬಂದಿದೆ. ಬೇರೆ ರೀತಿಯಲ್ಲಿ ಸರ್ಕಾರ ಯೋಚನೆ ಮಾಡಿಲ್ಲ.

Collection of Fees by Private Institution as Donations

953. Sri T. R. SHAMANNA (Fort).—

Will the Minister for Education be pleased to state :—

whether the management of many Private Institutions are collecting from parents of students unauthorisedly fees in the form of several kinds of donations etc ?

Sri N. M. KOTRABASIAH SOGI (Deputy Minister for Education).—

No.

Sri T. R. SHAMANNA.—Will the Government be pleased to give a list of institutions at least in Bangalore City which are not receiving any unauthorised donation so that we may admit our students there ?

† Sri N. M. KOTRABASIAH SOGI.—We have not received any complaints whatsoever with regard to collection of fees. But some of the private institutions are collecting donations like building donation, equipment donation, etc. They are collecting fees for sports, audio-visual, library fees, reading room fees, etc., but they are expected to put it on the notice board.

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ, ಮತ್ತು ಪರೀಕ್ಷೆ ಸಮಯದಲ್ಲಿ ಅನಧಿಕೃತವಾಗಿ ಡೊನೇಷನ್ ಮತ್ತು ಫೀಜಿನ ರೂಪವಾಗಿ ಹಣ ವಸೂಲು ಮಾಡುತ್ತಿರುವುದನ್ನು ಗಮನಕ್ಕೆ ತಂದರೆ ಅದನ್ನು ತಪ್ಪಿಸುವುದಕ್ಕೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಡೊನೇಷನ್ ವಸೂಲುಮಾಡುವುದು ರೂರ್ಸ್‌ಗೆ ವಿರುದ್ಧವಾಗುವುದಿಲ್ಲ, ಮ್ಯಾನೇಜ್‌ಮೆಂಟಿನವರು ತಮ್ಮ ಪಾಲಿನ ಹಣ ಒದಗಿಸಲು ಡೊನೇಷನ್ ವಸೂಲುಮಾಡುತ್ತಾರೆ. ಆದರೆ ಅದಕ್ಕೆ ಲೆಕ್ಕ ಇಟ್ಟು ಅದನ್ನು ಆಡಿಟ್ ಮಾಡಿಸಿ ಸರಕಾರಕ್ಕೆ ಲೆಕ್ಕ ಒಪ್ಪಿಸಬೇಕು. ಆ ಪ್ರಕಾರ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಉದಾಹರಣೆಗಳಿದ್ದರೆ ಅದನ್ನು ಗಮನಕ್ಕೆ ತಂದರೆ ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಶಾರದಾ ಮ್ಯಾನೇಜ್‌ಮೆಂಟಿನವರು ಹೈಸ್ಕೂಮರಿ, ನರ್ಸರಿ, ಪೆಕೆಂಡರಿ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ವಸೂಲು ಮಾಡುವ ಡೊನೇಷನ್ನನ್ನು ಯಾವ ಲೆಕ್ಕಕ್ಕೆ ಹಾಕುತ್ತಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾವ ಶಾಲೆಯಲ್ಲಿ ವಸೂಲು ಮಾಡುವರೋ ಆ ಶಾಲೆಯ ಲೆಕ್ಕಕ್ಕೆ ಹಾಕುತ್ತಾರೆ.

ಶ್ರೀ ಕೆ. ಪ್ರಭಾಕರ್.—ಖಾಸಗಿ ಶಾಲೆಗಳಲ್ಲಿ ಫೀಜು ವಸೂಲು ಮಾಡುವುದು ಬಹಳ ಹಾಸ್ಯಾಸ್ಪದ ಯಾಗಿರುವುದರಿಂದ ಸರಕಾರಿ ಶಾಲೆಗಳಲ್ಲಿ ಕೇವಲ ಬಡವರು ಮತ್ತು ಖಾಸಗಿ ಶಾಲೆಗಳಲ್ಲಿ ಇತರರು ಓದುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಟ್ಯೂಷನ್ ಫೀಜನ್ನು ವಸೂಲು ಮಾಡುವುದಕ್ಕೆ ಅವರಿಗೆ ಅಧಿಕಾರವಿಲ್ಲ, ಆ ರೀತಿ ಮಾಡಿದ